# ಸತ್ಯ ಜಗತಿದು ಪಂಚಭೇದವು ನಿತ್ಯ ಶ್ರೀ ಗೋವಿಂದನ

1. Ref.: Shri Purandara Dasara Sahitya Part – 1, Pooja Tatva, edited by Shri Betageri Krishna Sharma and Shri Bengeri Huchha Rayaru, page No. 06.
2. **Ref.:** Purandara Sahitya Darshana, Samputa 2, Adhyatma Darshana edited by Prof. S.K. Ramachandra Rao, page No. 53.
3. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 548.
4. **Note:** Lyrics given without highlights are as per Ref. 1.
5. **Note:** The wordings, given without highlights, are as per book in Ref. 1 above. The wordings in Ref. 2 are slightly different (differences are marked in yellow highlights) with respect to book in Ref.1 above. The wordings in Ref. 3 are a mix of Ref. 1 and Ref. 2. Hence, they are not considered here.
6. **Note:** Ankita is different in both these books. We have considered Ref.1 as standard and taken that Ankita for listing.
7. **Note:** The wordings followed by the singer are not matching fully with both the reference books.
8. **Note:** Please refer "Kaksha Taratamya" under "Adhyatma Chintane" in "References Menu Bar" in Home Page of this website.

ರಾಗ: ಸೌರಾಷ್ಟ್ರ ತಾಳ: ತ್ರಿವಿಡೆ

ಸತ್ಯ ಜಗಕಿದು ಪಂಚ ಭೇದವು ನಿತ್ಯ ಶ್ರೀ ಗೋವಿಂದನ
(ಕೃತ್ಯ ವರಿತು) (ಕೃತ್ಯ ತಿಳಿದು) ತಾರತಮ್ಯದಿ ಕೃಷ್ಣನಧಿಕೆಂದು ಸಾರಿರೈ ॥ ಪ ॥

ಜೀವ ಈಶಗೆ ಭೇದ ಸರ್ವತ್ರ
ಜೀವ ಜೀವಕೆ ಭೇದವು
(ಜೀವ ಜಡರೊಳು ಭೇದ ಜಡರೊಳು
ಭೇದ ಜಡ ಪರಮಾತ್ಮಗೆ) ॥ 1 ॥
(ಜೀವ ಜಡಕೆ ಜಡ ಜಡಕೆ
ಭೇದ ಜಡ ಪರಮಾತ್ಮಗೆ)

ಮಾನುಷೋತ್ತಮರಧಿಕ ಕ್ಷಿತಿಪರು
ಮನುಜ ದೇವ ಗಂಧರ್ವರು
(ಜಾನಪಿತರಽಜಾನ ಕರ್ಮಜ
ದಾನವಾರಿ ತತ್ತ್ವೇಶರು) ॥ 2 ॥
(ಜಾನಪಿತರಽಜಾನ ಕರ್ಮರು
ಉಕ್ತ ಶೇಷ ಶತಸ್ಥರು)

ಗಣಪ ಮಿತ್ರರು ಸಪ್ತ ಋಷಿಗಳು
ವಹ್ನಿ ನಾರದ ವರುಣನು
ಇನಜಗೆ ಸಮ ಚಂದ್ರ ಸೂರ್ಯರು
ಮನುಸುತೆಯು ಹೆಚ್ಚು ಪ್ರವಹನು ॥ 3 ॥

ದಕ್ಷ ಸಮ ಅನಿರುದ್ಧ ಗುರು ಶಚಿ
ರತಿ ಸ್ವಾಯಂಭುವರಾರ್ವರು
ಕಕ್ಷ ಪ್ರಾಣನಿಗಿಂತ ಕಾಮನು
ಕಿಂಚಿದಧಿಕನು ಇಂದ್ರನು ॥ 4 ॥

ದೇವ ಇಂದ್ರನಿಗಧಿಕ ಮಹಾರುದ್ರ
ದೇವರಿಗೆ ಸಮ ಗರುಡನು
ಕೇವಲವು ಈ ಶೇಷ ರುದ್ರರು
ದೇವಿ ಹೆಚ್ಚು ಸರಸ್ವತಿ ॥ 5 ॥
(ದೇವೇಂದ್ರನಿಂದಧಿಕ ಮಹರುದ್ರ
ರುದ್ರ ಸಮ ಶೇಷ ಗರುಡರು
ಗರುಡ ಶೇಷರಿಗಧಿಕರೆನಿಪರು
ದೇವಿ ಭಾರತಿ ಸರಸ್ವತಿ)

ವಾಯುವಿಗೆ ಸಮರಿಲ್ಲ ಜಗದೊಳು
ವಾಯು ದೇವರೆ ಬ್ರಹ್ಮರು
(ವಾಯು ಮುಕ್ತಗೆ ಕೋಟಿ ಗುಣದಿಂ -
ದಧಿಕ ಶಕ್ತಳು ಶ್ರೀ ರಮಾ) ॥ 6 ॥
(ವಾಯು ಬ್ರಹ್ಮಗೆ ಕೋಟಿ ಗುಣದಿಂದ

ಅಧಿಕ ಶಕ್ತಳು ಶ್ರೀ ರಮಾ)

ಅನಂತ ಗುಣದಿಂ ಲಕುಮಿಗಧಿಕನು
ಶ್ರೀ ಪುರಂದರ ವಿಠಲನು
ಘನ ಸಮರು (ಇಲ್ಲ) (ಇವಗಿಲ್ಲ) ಜಗದೊಳು
ಹನುಮ ಹೃತ್-ಪದ್ಮವಾಸಿಗೆ || 7 ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

[ಈ ಪದದಲ್ಲಿ ದ್ವೈತಸಿದ್ಧಾಂತದ ಮುಖ್ಯ ಪ್ರಮೇಯಗಳಾದ ಪಂಚಭೇದ ಮತ್ತು ದೇವತಾತಾರತಮ್ಯ ಇವುಗಳ ಉಲ್ಲೇಖವಿದೆ. ಮೊದಲ ಎರಡು ನುಡಿಗಳಲ್ಲಿ ಪಂಚಭೇದ, ಮುಂದೆ ಐದು ನುಡಿಗಳಲ್ಲಿ ಆರೋಹಣ ತಾರತಮ್ಯಕ್ರಮ ಇವನ್ನು ಹೇಳಿದ್ದಾರೆ.]

**ಕೃತ್ಯ ತಿಳಿದು / ಅರಿತು** = ಪರಮಾತ್ಮನ ಲೀಲೆಗಳನ್ನು ತಿಳಿದುಕೊಂಡು

**ತಾರತಮ್ಯದಿ ಕೃಷ್ಣನಧಿಕೆಂದು ಸಾರಿರೈ** = ತಾರತಮ್ಯದ ಮೂಲಕ ವಿಷ್ಣು ಸರ್ವೋತ್ತಮನೆಂದು ಸಾರಿರಿ

**ಸರ್ವತ್ರ** = ಸಂಸಾರದಲ್ಲಿಯೂ, ಮುಕ್ತಿಯಲ್ಲಿಯೂ

**ಪಂಚ ಭೇದ** = ೧) ಜೀವ - ಈಶ ಭೇದ, ೨) ಜೀವ - ಜೀವ ಭೇದ, ೩) ಜೀವ - ಜಡ ಭೇದ, ೪) ಜಡ - ಜಡ ಭೇದ ಮತ್ತು ೫) ಜಡ - ಈಶ ಭೇದ

**ಸತ್ಯ ಜಗತಿದು...** – 'ವಿಶ್ವಂ ಸತ್ಯಂ ವಶೇ ವಿಷ್ಣೋಃ' ಎಂಬ ಆಚಾರ್ಯರ ವಾಕ್ಯದ ಕನ್ನಡ ರೂಪ.

**ತಾರತಮ್ಯದಿ...** – ದೇವತಾ ತಾರತಮ್ಯದ ಪ್ರಯೋಜನವು ಹರಿಸರ್ವೋತ್ತಮತ್ವವನ್ನು ಸಾದಿಸುವುವೇ ಆಗಿದೆ.

**ಜೀವ ಈಶಗೆ...** – ಪಂಚಭೇದದ ವಿವರ. 'ಪರಮಶ್ರುತಿ'ಯ ಒಕ್ಕಣೆ – 'ಜೀವೇಶ್ವರಭಿದಾ,' 'ಜಡೇಶ್ವರಭಿದಾ,' 'ಜೀವಭೇದೋ ಮಿಥಃ,' 'ಜಡಜೀವಭಿದಾ,' 'ಮಿಥಃ ಜಡಭೇದಃ' ಎಂಬುದರ ಸರಳ ನಿರೂಪಣೆ ಇಲ್ಲಿದೆ.

**ಜಾನಪಿತರಜಾನ...** – ಇಲ್ಲೊಂದು ಪಾಠಾಂತರವಿದೆ– 'ಜಾನಪಿತರಜಾನಕರ್ಮಜ ದರ್ಾನವಾರಿ ತತ್ತ್ವೇಶರು.' ಮನುಜ ಗಂಧರ್ವರು ಮೂವತ್ತೊಂದನೆಯ ಕಕ್ಷೆಯವರು; ಅವರ ಮೇಲೆ (ಎಂದರೆ ಅವರಿಗಿಂತ ಉತ್ತಮರು) ದೇವಗಂಧರ್ವರು, ಅವರ ಮೇಲೆ ಚಿರಪಿತೃಗಳು ಇವರನ್ನೇ ಇಲ್ಲಿ 'ಜಾನಪಿತರು' ಎಂದು ಕರೆಯಲಾಗಿದೆ (ಇಪ್ಪತ್ತೊಂಬತ್ತನೆಯ ಕಕ್ಷೆ). ಅವರ ಮೇಲೆ ಅಜಾನಜೇಯಾ ಧಮರು (ಶತೋನ ಶತಕೋಟಿ

ಋಷಿಗಳು); ಇವರನ್ನು 'ಅಜಾನಜ ಕರ್ಮಜರು' ಎಂದು ಇಲ್ಲಿ ಕರೆದಿದ್ದಾರೆ. ಈ ಇಪ್ಪತ್ತೆಂಟನೆಯ ಕಕ್ಷೆಯಾದ ಮೇಲೆ 'ಶೇಷಶತಸ್ಥರು' ಎಂಬ ನೂರು ದೇವತೆಗಳು ಹದಿನೆಂಟನೆಯ ಕಕ್ಷೆಗೆ ಸೇರಿದವರು. ಇವರಲ್ಲಿ ಅಷ್ಟ ವಸುಗಳು, ಏಕಾದಶರುದ್ರರು, ದ್ವಾದಶಾದಿತ್ಯರು, ಏಕೋನಪಂಚಾಶತ್ ಮರುತ್ತುಗಳು ದಶವಿಶ್ವೇದೇವತೆಗಳು ಮೊದಲಾದವರು ಸೇರುತ್ತಾರೆ.

**ಗಣಪ ಮಿತ್ರರು...** – ಗಣಪತಿಯೂ ಶೇಷಶತಸ್ಥರ ಕಕ್ಷೆಯಲ್ಲೇ ಸೇರಿದವನು, ಆದರೆ ಅವರಿಗಿಂತ ಉತ್ತಮ. ಆಕಾಶಾಭಿಮಾನಿಯಾಗಿ ಮುಖ್ಯತತ್ತ್ವೇಶರ ಎಣಿಕೆಯಲ್ಲಿ ಬಂದವನು. ಮಿತ್ರ (ಆದಿತ್ಯ) ಅವನಿಗಿಂತ ಉತ್ತಮ, ಹದಿನೇಳನೆಯ ಕಕ್ಷೆ; ಸಪ್ತಋಷಿಗಳು (ಮರೀಚಿ, ಅತ್ರಿ, ಅಂಗೀರಸ, ಪುಲಸ್ತ್ಯ, ಪುಲಹ, ಕ್ರತು, ವಸಿಷ್ಠ, ಇವರು ಸ್ವಾಯಂಭುವ ಮನ್ವಂತರದವರು; ಮಹಾಭಾರತದ ಶಾಂತಿಪರ್ವದಲ್ಲಿ ಇವರ ಉಲ್ಲೇಖವಿದೆ; ವೈವಸ್ವತ ಮನ್ವಂತರದಲ್ಲಿ ವಿಶ್ವಾಮಿತ್ರ, ಜಮದಗ್ನಿ, ಭರದ್ವಾಜ, ಗೌತಮ, ಅತ್ರಿ, ವಸಿಷ್ಠ, ಕಶ್ಯಪ ಇವರು ಸಪ್ತರ್ಷಿಗಳು).

**ವಹ್ನಿ** – ಪ್ರಧಾನಾಗ್ನಿ.

**ಇನಜ** – ಯಮಧರ್ಮ.

**ಸುತೆ** = ಮಗಳು, ಸುತಾ, ಕುವರಿ, ಕುಮಾರಿ
**ಮನುಸುತೆಯು** – ಶತರೂಪಾದೇವಿ.

(ಕಕ್ಷ ತಾರತಮ್ಯದ ಪ್ರಕಾರ ಮನುಸತಿ ಹೆಚ್ಚು ಸಮಂಜಸವೆನಿಸುತ್ತದೆ. ೧೨ ನೇ ಕಕ್ಷೆಯಲ್ಲಿ ಚಂದ್ರ ಸೂರ್ಯರ ಜೊತೆ ಶತರೂಪಾದೇವಿ (ಸ್ವಾಯಂಭುವ ಮನುವಿನ ಪತ್ನಿ) ಬರುತ್ತಾರೆ. ಇವರಕ್ಕಿಂತ ಹೆಚ್ಚು ೧೧ ನೇ ಕಕ್ಷೆಯಲ್ಲಿ ಪ್ರವಹವಾಯು ಇದ್ದಾರೆ. ೧೫ ನೇ ಕಕ್ಷೆಯಲ್ಲಿ ಬರುವ **ಮನುಸುತೆ** (**ಮನುವಿನ ಮಗಳು**) ಪ್ರಸೂತಿ ದೇವಿ. ಹೀಗೆ ತೆಗೆದುಕೊಂಡರೆ ತುಂಬಾ ಗೊಂದಲವಾಗುತ್ತದೆ.
(ಸ್ವಾಯಂಭುವ ಮನುವಿಗೆ ಮೂರು ಜನ ಹೆಣ್ಣು ಮಕ್ಕಳು – ಆಕೂತಿ, ದೇವಭೂತಿ ಮತ್ತು ಪ್ರಸೂತಿ. ಹರಿಕಥಾಮೃತಸಾರದಲ್ಲಿ ಆಕೂತಿ – ದೇವಭೂತಿಯರ ಕಕ್ಷೆ ಬಗ್ಗೆ ತೆಗೆದುಕೊಂಡಿಲ್ಲ. ಪ್ರಸೂತಿ ದೇವಿಯು ದಕ್ಷ ಪ್ರಜಾಪತಿಯ ಹೆಂಡತಿ ಅಂದರೆ ರುದ್ರ ದೇವರ ಅತ್ತೆ. ಹೀಗೆ ತೆಗೆದುಕೊಂಡರೆ ತುಂಬಾ ಗೊಂದಲವಾಗುತ್ತದೆ.)

**ಪ್ರವಹನು** – ಪ್ರವಹವಾಯು, ಭೂತವಾಯುವಿನ ಪ್ರಧಾನಾಭಿಮಾನಿ, ಜಡ.

**ಕಕ್ಷಪ್ರಾಣ** – ತೈಜಸಾಹಂಕಾರದಿಂದ ಉದ್ಭೂತವಾದ ಪ್ರಾಣ.

**ಹನುಮ ಹೃತ್ಪದ್ಮವಾಸಿ** – ಮಧ್ವಾಚಾರ್ಯರ ಹೃದಯದಲ್ಲಿ ನೆಲೆಸಿದ ಹರಿ.

**Classification:** Keerthane
**Ankita:** sri purandara vittala
**Location:** NA
**Category:** Taratamya, Pooja Tatva
**Sub-Category:** Vishnu, Ananta, paramatma, Lakshmi, deva, devi, taratamya, hrudaya, satya, Krishna, adhika, jiva, jada, hanuma, kaksha
**Pravachana:** NA
**Explanation:** Unknown